## ಕರ್ನಾಟಕ ಸರಕು ಮತ್ತು ಸೇವೆಗಳ *ಅಧಿನಿಯಮಗಳು*, 2017 ರ *ಅಡಿಯಲ್ಲಿನ ಟಿಡಿಎಸ್ ಉಪಬಂಧಗಳು*

51. ಮೂಲದಲ್ಲಿ ತೆರಿಗೆ ಮುರುಗಡೆ.- (1) ಈ ಅಧಿನಿಯಮದಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ ಸಹ, ಸರ್ಕಾರವು,-

(ಎ) ಕೇಂದ್ರ ಅಥವಾ ರಾಜ್ಯ ಸರ್ಕಾರದ ಒಂದು ಇಲಾಖೆ ಅಥವಾ ಕಾರ್ಯಸಂಸ್ಥೆ; ಅಥವಾ

(ಬಿ) ಸ್ಥಳೀಯ ಪ್ರಾಧಿಕಾರ; ಅಥವಾ

**ಪ್ರಕರಣ 2 ರ ಉಪ ಪ್ರಕರಣ (69) ಕೆಳಕಂಡಂತಿದೆ**

*(69) **"ಸ್ಥಳೀಯ ಪ್ರಾಧಿಕಾರ"** ಎಂದರೆ:–*
*(ಎ) ಸಂವಿಧಾನದ ಅನುಚ್ಛೇದ 243ರ ಖಂಡ (ಡಿ) ದಲ್ಲಿ ಪರಿಭಾಷಿಸಿರುವಂತಹ ಒಂದು "ಪಂಚಾಯತ್";*
*(ಬಿ) ಸಂವಿಧಾನದ ಅನುಚ್ಛೇದ 243ಪಿ ಯ ಖಂಡ (ಇ) ದಲ್ಲಿ ಪರಿಭಾಷಿಸಿರುವಂತಹ ಒಂದು "ಪುರಸಭೆ";*
*(ಸಿ) ಪೌರಾಡಳಿತ ಅಥವಾ ಸ್ಥಳೀಯ ನಿಧಿಯ ನಿಯಂತ್ರಣ ಅಥವಾ ನಿರ್ವಹಣೆ ಮಾಡಲು ಕಾನೂನು ಬದ್ಧವಾದ ಹಕ್ಕುಳ್ಳಂತಹ ಅಥವಾ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರದಿಂದ ವಹಿಸಿಕೊಡಲಾದ ಯಾವುದೇ ಪುರಸಭಾ ಸಮಿತಿ, ಜಿಲ್ಲಾ ಪರಿಷತ್, ಜಿಲ್ಲಾ ಮಂಡಳಿ ಮತ್ತು ಇತರ ಪ್ರಾಧಿಕಾರ;*
*(ಡಿ) ದಂಡು ಪ್ರದೇಶಗಳ ಅಧಿನಿಯಮ, 2006ರ (2006ರ ಕೇಂದ್ರ ಅಧಿನಿಯಮ 41) ಪ್ರಕರಣ 3 ರಲ್ಲಿ ಪರಿಭಾಷಿಸಿರುವಂತಹ ಒಂದು ದಂಡು ಪ್ರದೇಶ ಮಂಡಳಿ;*
*(ಇ) ಸಂವಿಧಾನದ ಆರನೇ ಅನುಸೂಚಿಯ ಅಡಿಯಲ್ಲಿ ರಚಿಸಲಾದ ಒಂದು ಪ್ರಾದೇಶಿಕ ಪರಿಷತ್ ಅಥವಾ ಒಂದು ಜಿಲ್ಲಾ ಪರಿಷತ್;*
*(ಎಫ್) ಸಂವಿಧಾನದ ಅನುಚ್ಛೇದ 371ರ ಅಡಿಯಲ್ಲಿ ರಚಿಸಲಾದ ಒಂದು ಅಭಿವೃದ್ಧಿ ಮಂಡಳಿ ಅಥವಾ;*
*(ಜಿ) ಸಂವಿಧಾನದ ಅನುಚ್ಛೇದ 371ಎ ದ ಅಡಿಯಲ್ಲಿ ರಚಿಸಲಾದ ಒಂದು ಪ್ರಾದೇಶಿಕ ಪರಿಷತ್;*

(ಸಿ) ಸರ್ಕಾರಿ ಏಜೆನ್ಸಿಗಳು; ಅಥವಾ

(ಡಿ) (ಎ) ಪ್ರಾಧಿಕಾರ ಅಥವಾ ಮಂಡಳಿ ಅಥವಾ ಯಾವುದೇ ಇತರ ಸಂಸ್ಥೆ, -

(i) ಪಾರ್ಲಿಮೆಂಟ್ ಅಥವಾ ರಾಜ್ಯ ಶಾಸಕಾಂಗವು ಸ್ಥಾಪಿಸಿದ; ಅಥವಾ

(ii) ಯಾವುದೇ ಸರ್ಕಾರ ಸ್ಥಾಪಿಸಿದ,

ಇಕ್ವಿಟಿ ಅಥವಾ ನಿಯಂತ್ರಣದ ಮೂಲಕ ಶೇಕಡ ಐವತ್ತೊಂದು ಹೆಚ್ಚಿನ ಭಾಗವಹಿಸುವಿಕೆ, ಯಾವುದಾದರೂ ಕಾರ್ಯ ನಿರ್ವಹಿಸಲು;

(ಬಿ) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಸ್ಥಳೀಯರು ಸ್ಥಾಪಿಸಿದ ಸೊಸೈಟಿ ಸೊಸೈಟಿಗಳ ನೋಂದಣಿ ಕಾಯಿದೆ 1860ರ ಅಡಿಯಲ್ಲಿ ಅಧಿಕಾರ (21 ರ 1860);

(ಸಿ) ಸಾರ್ವಜನಿಕ ವಲಯದ ಉದ್ಯಮಗಳು.

-(ಈ ಪ್ರಕರಣದಲ್ಲಿ ಇನ್ನು ಮುಂದೆ "ಮುರುಗಡೆದಾರ" ಎಂದು ಉಲ್ಲೇಖಿಸಲಾಗಿದೆ) ಒಂದು ಕರಾರಿನ ಅಡಿಯಲ್ಲಿನ ಅಂಥ ಪೂರೈಕೆಯ ಮೌಲ್ಯ ಎರಡು ಲಕ್ಷದ ಐವತ್ತು ಸಾವಿರ ರೂಪಾಯಿಗಳನ್ನು ಮೀರಿದ್ದಲ್ಲಿ, ತೆರಿಗೆದಾಯಕ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆದಾರನಿಗೆ, (ಈ ಪ್ರಕರಣದಲ್ಲಿ ಇನ್ನು ಮುಂದೆ "ಮುರುಗಡೆಗೊಳಗಾದವನು" ಎಂದು ಉಲ್ಲೇಖಿಸಲಾಗಿದೆ) ಮಾಡಿದ ಅಥವಾ ಜಮೆಗೊಳಿಸಿದ ಸಂದಾಯದಿಂದ ಶೇಕಡ ಒಂದರ ದರದಲ್ಲಿ ತೆರಿಗೆಯನ್ನು ಮುರುಗಡೆ ಮಾಡಲು ಆಜ್ಞಾಪಿಸಬಹುದು.

ಪರಂತು, ಪೂರೈಕೆದಾರನ ಸ್ಥಾನ ಮತ್ತು ಪೂರೈಕೆಯ ಸ್ಥಳವು, ಒಂದು ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿದ್ದು, ಅದು ಸ್ವೀಕರಿಸುವವನ ನೋಂದಣಿಯ ರಾಜ್ಯ ಅಥವಾ ಸಂದರ್ಭಾನುಸಾರವಾಗಿ ಕೇಂದ್ರಾಡಳಿತ ಪ್ರದೇಶದಿಂದ ಭಿನ್ನವಾಗಿದ್ದರೆ, ಮುರುಗಡೆಯನ್ನು ಮಾಡತಕ್ಕದ್ದಲ್ಲ.

ವಿವರಣೆ:- ಮೇಲೆ ನಿರ್ದಿಷ್ಟಪಡಿಸಿದ ತೆರಿಗೆ ಮುರುಗಡೆಯ ಉದ್ದೇಶಕ್ಕಾಗಿ, ಬೆಲೆಪಟ್ಟಿಯಲ್ಲಿ ಸೂಚಿಸಿದ ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಏಕೀಕೃತ ತೆರಿಗೆ, ಮತ್ತು ಉಪಕರವನ್ನು ಹೊರತುಪಡಿಸಿದ ಮೊತ್ತವನ್ನು ಪೂರೈಕೆಯ ಮೌಲ್ಯ, ಎಂಬುದಾಗಿ ತೆಗೆದುಕೊಳ್ಳತಕ್ಕದ್ದು.

(2) ಈ ಪ್ರಕರಣದ ಅಡಿಯಲ್ಲಿ ತೆರಿಗೆಯೆಂದು ಮುರುಗಡೆ ಮಾಡಿದ ಮೊತ್ತವು, ಅಂಥ ಮುರುಗಡೆ ಮಾಡಿದ ತಿಂಗಳು ಕೊನೆಗೊಂಡ ನಂತರದ ಹತ್ತು ದಿನಗಳ ಒಳಗಾಗಿ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮುರುಗಡೆದಾರನಿಂದ ಸರ್ಕಾರಕ್ಕೆ ಸಂದಾಯವಾಗತಕ್ಕದ್ದು.

(3) ಮುರುಗಡೆದಾರನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ, ಕರಾರಿನ ಮೌಲ್ಯ, ಮುರುಗಡೆಯ ದರ, ಮುರುಗಡೆಗೊಳಿಸಿದ ಮೊತ್ತ, ಸರ್ಕಾರಕ್ಕೆ ಸಂದಾಯ ಮಾಡಿದ ಮೊತ್ತ ಮತ್ತು ಅಂಥ ಇತರ ವಿವರಗಳನ್ನು, ಅದರಲ್ಲಿ ನಮೂದಿಸಿರುವ ಒಂದು ಪ್ರಮಾಣ ಪತ್ರವನ್ನು, ಮುರುಗಡೆಗೊಳಗಾದವನಿಗೆ ಒದಗಿಸತಕ್ಕದ್ದು.

(4) ಯಾವುದೇ ಮುರುಗಡೆದಾರನು, ಮೂಲದಲ್ಲಿ ತೆರಿಗೆಯನ್ನು ಮುರುಗಡೆಗೊಳಿಸಿದ ನಂತರ, ಹಾಗೆ ಮುರುಗಡೆಗೊಳಿಸಿದ ಮೊತ್ತವನ್ನು ಸರ್ಕಾರಕ್ಕೆ ಜಮೆಗೊಳಿಸಿದ ಐದು ದಿನಗಳ ಒಳಗಾಗಿ, ಮುರಗಡೆಗೊಳಗಾದವನಿಗೆ ಪ್ರಮಾಣಪತ್ರವನ್ನು ಒದಗಿಸುವಲ್ಲಿ ವಿಫಲನಾದರೆ, ಅಂಥ ಐದು ದಿನಗಳ ಅವಧಿಯು ಕೊನೆಗೊಂಡ ನಂತರದ ದಿನದಿಂದ ವಿಫಲತೆಯನ್ನು ಸರಿಪಡಿಸುವವರೆಗೆ, ಪ್ರತಿ ದಿನಕ್ಕೆ ನೂರು ರೂಪಾಯಿಯ ಮೊತ್ತವನ್ನು, ಗರಿಷ್ಠ ಐದು ಸಾವಿರ ರೂಪಾಯಿಗಳ ಮೊತ್ತಕ್ಕೆ ಒಳಪಟ್ಟು, ವಿಳಂಬ ಶುಲ್ಕದ ರೂಪದಲ್ಲಿ ಸಂದಾಯ ಮಾಡತಕ್ಕದ್ದು.

(5) ಮುರುಗಡೆಗೊಳಗಾದವನು, ಮುರುಗಡೆಗೊಳಿಸಿದ ಮತ್ತು ಪ್ರಕರಣ 39ರ ಉಪಪ್ರಕರಣ (3)ರ ಅಡಿಯಲ್ಲಿ ಒದಗಿಸಿದ ಮುರುಗಡೆದಾರನ ರಿಟರ್ನ್‌ನಲ್ಲಿ ಪ್ರತಿಬಿಂಬಿಸಿದ ತೆರಿಗೆಯ ಜಮೆಯನ್ನು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ, ತನ್ನ ವಿದ್ಯುನ್ಮಾನ ನಗದು ಖಾತೆಯಲ್ಲಿ ಕ್ಲೇಮು ಮಾಡತಕ್ಕದ್ದು.

**ಪ್ರಕರಣ 39 ರ ಉಪ ಪ್ರಕರಣ (3) ಕೆಳಕಂಡಂತಿದೆ**

*39. ರಿಟರ್ನ್‌ಗಳನ್ನು ಒದಗಿಸುವುದು.- (3) ಪ್ರಕರಣ 51ರ ಉಪಬಂಧಗಳ ಅಡಿಯಲ್ಲಿ, ಮೂಲದಲ್ಲಿ ತೆರಿಗೆಯನ್ನು ಮುರುಗಡೆ ಮಾಡುವುದು ಅಗತ್ಯವಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಅಂಥ ಮುರುಗಡೆಗಳನ್ನು ಮಾಡಲಾಗಿರುವ ತಿಂಗಳಿಗೆ ಒಂದು ರಿಟರ್ನ್ ಅನ್ನು ವಿದ್ಯುನ್ಮಾನ ರೀತಿಯಲ್ಲಿ, ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ, ಅಂಥ ತಿಂಗಳು ಕೊನೆಗೊಂಡ ಹತ್ತು ದಿನಗಳ ಒಳಗಾಗಿ ಒದಗಿಸತಕ್ಕದ್ದು.*

(6) ಯಾವುದೇ ಮುರುಗಡೆದಾರನು ಉಪಪ್ರಕರಣ (1)ರ ಅಡಿಯಲ್ಲಿ ತೆರಿಗೆಯೆಂದು ಮುರುಗಡೆಗೊಳಿಸಿದ ಮೊತ್ತವನ್ನು ಸರ್ಕಾರಕ್ಕೆ ಸಂದಾಯ ಮಾಡುವಲ್ಲಿ ವಿಫಲನಾದರೆ, ಮುರುಗಡೆಗೊಳಿಸಿದ ತೆರಿಗೆ ಮೊತ್ತಕ್ಕೆ ಹೆಚ್ಚುವರಿಯಾಗಿ, ಪ್ರಕರಣ 50ರ ಉಪಪ್ರಕರಣ (1)ರ ಉಪಬಂಧಗಳಿಗೆ ಅನುಸಾರವಾಗಿ, ಬಡ್ಡಿಯನ್ನು ಸಂದಾಯ ಮಾಡತಕ್ಕದ್ದು.

**ಪ್ರಕರಣ 50ರ ಉಪಪ್ರಕರಣ (1) ರ ಉಪಬಂಧ ಕೆಳಕಂಡಂತಿದೆ**

*50. ತೆರಿಗೆಯ ವಿಳಂಬ ಸಂದಾಯದ ಮೇಲೆ ಬಡ್ಡಿ.- (1) ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳಿಗೆ ಅನುಸಾರವಾಗಿ ತೆರಿಗೆಯನ್ನು ಸಂದಾಯ ಮಾಡಲು ಬಾಧ್ಯನಾಗಿರುವ ಆದರೆ ತೆರಿಗೆಯನ್ನು ಅಥವಾ ಅದರ ಯಾವುದೇ ಭಾಗವನ್ನು ನಿಯಮಿಸಲಾದ ಅವಧಿಯೊಳಗೆ ಸರ್ಕಾರಕ್ಕೆ ಸಂದಾಯ ಮಾಡಲು ವಿಫಲನಾದ ಪ್ರತಿಯೊಬ್ಬ ವ್ಯಕ್ತಿಯು, ತೆರಿಗೆ ಅಥವಾ ಅದರ ಯಾವುದೇ ಭಾಗವು ಸಂದಾಯವಾಗದೆ ಉಳಿದ ಅವಧಿಗೆ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರದಿಂದ ಅಧಿಸೂಚಿಸಬಹುದಾದ, ಶೇಕಡಾ ಹದಿನೆಂಟರಷ್ಟನ್ನು ಮೀರದ, ಅಂಥ ದರದಲ್ಲಿ ಬಡ್ಡಿಯನ್ನು, ತಾನಾಗಿಯೇ, ಸಂದಾಯ ಮಾಡತಕ್ಕದ್ದು.*

(7) ಈ ಪ್ರಕರಣದ ಅಡಿಯಲ್ಲಿ ಬಾಕಿಯಿರುವ ಮೊತ್ತದ ನಿರ್ಧರಣೆಯನ್ನು ಪ್ರಕರಣ 73 ಅಥವಾ ಪ್ರಕರಣ 74ರಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ಮಾಡತಕ್ಕದ್ದು.

**ಪ್ರಕರಣ 73 ಕೆಳಕಂಡಂತಿದೆ**

*73. ಮೋಸ ಅಥವಾ ಉದ್ದೇಶಪೂರ್ವಕವಾಗಿ ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳುವುದು ಅಥವಾ ಬಚ್ಚಿಡುವುದನ್ನು ಹೊರತುಪಡಿಸಿ ಇತರ ಯಾವುದೇ ಕಾರಣಕ್ಕಾಗಿ ತೆರಿಗೆ ಸಂದಾಯ ಮಾಡದಿರುವ ಅಥವಾ ಕಡಿಮೆ ಸಂದಾಯ ಮಾಡಿದ ಅಥವಾ ತಪ್ಪಿನಿಂದ ಮಾಡಿದ ಮರುಪಾವತಿಯ ಅಥವಾ ತಪ್ಪಾಗಿ ತೆಗೆದುಕೊಂಡ ಅಥವಾ ಬಳಸಿದ ಹೂಡುವಳಿ ತೆರಿಗೆ ಜಮೆಯ ನಿರ್ಧರಣೆ.- (1) ತೆರಿಗೆಯನ್ನು ತಪ್ಪಿಸುವುದಕ್ಕಾಗಿ ಮೋಸ ಅಥವಾ ಉದ್ದೇಶಪೂರ್ವಕವಾಗಿ ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳುವುದು ಅಥವಾ ಬಚ್ಚಿಡುವುದನ್ನು ಹೊರತುಪಡಿಸಿ ಇತರ ಯಾವುದೇ ಕಾರಣಗಳಿಗಾಗಿ, ಯಾವುದೇ ತೆರಿಗೆಯನ್ನು ಸಂದಾಯ ಮಾಡದಿರುವುದು ಅಥವಾ ಕಡಿಮೆ ಸಂದಾಯ ಮಾಡಿರುವುದು ಅಥವಾ ತಪ್ಪಿನಿಂದ ಮರುಪಾವತಿ ಮಾಡಿರುವುದು ಅಥವಾ ಹೂಡುವಳಿ ತೆರಿಗೆ ಜಮೆಯನ್ನು ತಪ್ಪಾಗಿ ತೆಗೆದುಕೊಂಡಿರುವುದು ಅಥವಾ ಬಳಸಿರುವುದು ಯುಕ್ತ ಅಧಿಕಾರಿಗೆ ಕಂಡುಬಂದಲ್ಲಿ, ಆತನು, ಹಾಗೆ ಸಂದಾಯ ಮಾಡದೇ ಇರುವ ಅಥವಾ ಹಾಗೆ ಕಡಿಮೆ ಸಂದಾಯ ಮಾಡಿರುವ ತೆರಿಗೆಯ ಹೊಣೆಯನ್ನು ಹೊರಿಸಬಹುದಾದÀ ವ್ಯಕ್ತಿಗೆ, ಅಥವಾ ಯಾರಿಗೆ ತಪ್ಪಿನಿಂದ ಮರುಪಾವತಿ ಮಾಡಲಾಗಿದೆಯೊ ಅಥವಾ ಯಾರು ಹೂಡುವಳಿ ತೆರಿಗೆ ಜಮೆಯನ್ನು ತಪ್ಪಾಗಿ ತೆಗೆದುಕೊಂಡಿರುವನೋ ಅಥವಾ ಬಳಸಿರುವನೋ ಅವನು, ಸೂಚನಾಪತ್ರದಲ್ಲಿ ನಿರ್ದಿಷ್ಟಪಡಿಸಿರುವ ಮೊತ್ತವನ್ನು ಅದರ ಮೇಲೆ ಪ್ರಕರಣ 50ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಬಡ್ಡಿ ಮತ್ತು ಈ ಅಧಿನಿಯಮದ ಉಪಬಂಧಗಳು ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ವಿಧಿಸಬಹುದಾದ ದಂಡದ ಜೊತೆಗೆ, ಏಕೆ ಸಂದಾಯ ಮಾಡಬಾರದು ಎನ್ನುವುದಕ್ಕೆ ಕಾರಣಗಳನ್ನು ತೋರಿಸುವಂತೆ ಅವನನ್ನು ಅಗತ್ಯಪಡಿಸಿ ಸೂಚನಾಪತ್ರವನ್ನು ನೀಡತಕ್ಕದ್ದು.*

*(2) ಯುಕ್ತ ಅಧಿಕಾರಿಯು, ಆದೇಶ ಹೊರಡಿಸುವಿಕೆಗಾಗಿ ಉಪ-ಪ್ರಕರಣ (10)ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಕಾಲಮಿತಿಗಿಂತ ಕೊನೆಯ ಪಕ್ಷ ಮೂರು ತಿಂಗಳು ಮುಂಚಿತವಾಗಿ ಉಪ-ಪ್ರಕರಣ (1)ರ ಅಡಿಯಲ್ಲಿ ಸೂಚನಾಪತ್ರವನ್ನು ನೀಡತಕ್ಕದ್ದು.*

*(3) ಉಪ-ಪ್ರಕರಣ (1)ರ ಅಡಿಯಲ್ಲಿ ಯಾವುದೇ ಅವಧಿಗಾಗಿ ಸೂಚನಾ ಪತ್ರವನ್ನು ನೀಡಲಾಗಿದ್ದಲ್ಲಿ, ಉಪ-ಪ್ರಕರಣ (1)ರ ಅಡಿಯಲ್ಲಿ ವ್ಯಾಪ್ತವಾಗಿರುವ ಅವಧಿಗಳÀನ್ನು ಹೊರತುಪಡಿಸಿದ ಇತರ ಅಂಥ ಅವಧಿಗಳಿಗೆ, ಸಂದಾಯ ಮಾಡದಿರುವ ಅಥವಾ ಕಡಿಮೆ ಸಂದಾಯ ಮಾಡಿದ ತೆರಿಗೆಯ ಅಥವಾ ತಪ್ಪಿನಿಂದ ಮಾಡಿದ ಮರುಪಾವತಿಯ ಅಥವಾ ತಪ್ಪಾಗಿ ತೆಗೆದುಕೊಂಡ ಅಥವಾ ಬಳಸಿದ ಹೂಡುವಳಿ ತೆರಿಗೆ ಜಮೆಯ ವಿವರಗಳನ್ನು ಒಳಗೊಂಡ ಒಂದು ವಿವರಪತ್ರವನ್ನು, ಯುಕ್ತ ಅಧಿಕಾರಿಯು ತೆರಿಗೆಯ ಹೊಣೆಯನ್ನು ಹೊರಿಸಬಹುದಾದÀ ವ್ಯಕ್ತಿಗೆ ಜಾರಿ ಮಾಡಬಹುದು.*

*(4) ಅಂಥ ತೆರಿಗೆ ಅವಧಿಗಳಿಗಾಗಿ ಉಪಪ್ರಕರಣ (1)ರ ಅಡಿಯಲ್ಲಿ ವ್ಯಾಪ್ತವಾಗಿರುವುದನ್ನು ಹೊರತುಪಡಿಸಿದ ಅಂಥ ತೆರಿಗೆ ಅವಧಿಗಳಿಗೆ ಆಧರಿಸಿರುವ ಕಾರಣಾಧಾರಗಳು, ಮುಂಚಿನ ಸೂಚನಾಪತ್ರದಲ್ಲಿ ನಮೂದಿಸಲಾಗಿರುವವೇ ಆಗಿವೆ ಎನ್ನುವ ಷರತ್ತಿಗೆ ಒಳಪಟ್ಟು ಅಂಥ ವಿವರಪತ್ರದ ಜಾರಿ ಮಾಡುವಿಕೆಯನ್ನು ಉಪ-ಪ್ರಕರಣ (1)ರ ಅಡಿಯಲ್ಲಿ ಅಂಥ ವ್ಯಕ್ತಿಗೆ ಜಾರಿ ಮಾಡಿದ ಸೂಚನಾ ಪತ್ರ ಎಂದು ಪರಿಭಾವಿಸತಕ್ಕದ್ದು.*

*(5) ತೆರಿಗೆಯ ಹೊಣೆಯನ್ನು ಹೊರಿಸಬಹುದಾದ ವ್ಯಕ್ತಿಯು, ಉಪ-ಪ್ರಕರಣ (1)ರ ಅಡಿಯಲ್ಲಿನ ಸೂಚನಾ ಪತ್ರ ಅಥವಾ ಸಂದರ್ಭಾನುಸಾರವಾಗಿ ಉಪಪ್ರಕರಣ (3)ರ ಅಡಿಯಲ್ಲಿನ ವಿವರಪತ್ರವನ್ನು ಜಾರಿ ಮಾಡುವುದಕ್ಕೆ ಮೊದಲೇ, ಸ್ವ-ನಿಶ್ಚಿತಪಡಿಸಿಕೊಂಡಿರುವುದರ ಆಧಾರದ ಮೇಲಿನ ಅಂಥ ತೆರಿಗೆಯ ಮೊತ್ತವನ್ನು ಅಥವಾ ಯುಕ್ತ ಅಧಿಕಾರಿಯಿಂದ ನಿಶ್ಚಿತಪಡಿಸಿದ ತೆರಿಗೆಯ ಮೊತ್ತವನ್ನು, ಅದರ ಮೇಲೆ ಪ್ರಕರಣ 50ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಬಡ್ಡಿಯ ಜೊತೆಗೆ, ಸಂದಾಯ ಮಾಡುವುದು ಮತ್ತು ಅಂಥ ಸಂದಾಯದ ಮಾಹಿತಿಯನ್ನು ಯುಕ್ತ ಅಧಿಕಾರಿಗೆ ಲಿಖಿತವಾಗಿ ತಿಳಿಸುವುದು.*

*(6) ಅಂಥ ಮಾಹಿತಿಯ ಸ್ವೀಕೃತಿಯ ಮೇರೆಗೆ, ಯುಕ್ತ ಅಧಿಕಾರಿಯು, ಹಾಗೆ ಸಂದಾಯ ಮಾಡಲಾದ ತೆರಿಗೆ ಅಥವಾ ಈ ಅಧಿನಿಯಮದ ಅಡಿಯಲ್ಲಿ ಅಥವಾ ಇದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ದಂಡಕ್ಕೆ ಸಂಬಂಧಿಸಿದಂತೆ, ಉಪ-ಪ್ರಕರಣ (1)ರ ಅಡಿಯಲ್ಲಿ ಸೂಚನಾ ಪತ್ರ ಅಥವಾ ಸಂದರ್ಭಾನುಸಾರವಾಗಿ, ಉಪ-ಪ್ರಕರಣ (3)ರ ಅಡಿಯಲ್ಲಿ ವಿವರಪತ್ರವನ್ನು ಜಾರಿ ಮಾಡತಕ್ಕದ್ದಲ್ಲ.*

*(7) ಉಪ-ಪ್ರಕರಣ (5)ರ ಅಡಿಯಲ್ಲಿ ಸಂದಾಯ ಮಾಡಲಾದ ಮೊತ್ತವು, ವಾಸ್ತವಿಕವಾಗಿ ಸಂದಾಯ ಮಾಡಬೇಕಾದ ಮೊತ್ತಕ್ಕಿಂತ ಕಡಿಮೆಯಿದೆ ಎಂದು ಯುಕ್ತ ಅಧಿಕಾರಿಯು ಅಭಿಪ್ರಾಯವನ್ನು ಹೊಂದಿದ್ದಲ್ಲಿ, ಅವನು ವಾಸ್ತವಿಕವಾಗಿ ಸಂದಾಯ ಮಾಡಬೇಕಾದ ಮೊತ್ತಕ್ಕಿಂತ ಕಡಿಮೆಯಿರುವ ಅಂಥ ಮೊತ್ತಕ್ಕೆ ಸಂಬಂಧಿಸಿದಂತೆ ಉಪಪ್ರಕರಣ (1)ರಲ್ಲಿ ಉಪಬಂಧಿಸಿದಂತೆ ಸೂಚನಾ ಪತ್ರವನ್ನು ನೀಡಲು ಮುಂದುವರೆಯತಕ್ಕದ್ದು.*

*(8) ಉಪ-ಪ್ರಕರಣ (1)ರ ಅಡಿಯಲ್ಲಿ ಅಥವಾ ಉಪ-ಪ್ರಕರಣ (3)ರ ಅಡಿಯಲ್ಲಿ ತೆರಿಗೆಯ ಹೊಣೆಯನ್ನು ಹೊರಿಸಬಹುದಾದ ವ್ಯಕ್ತಿಯು, ಸದರಿ ತೆರಿಗೆಯನ್ನು ಪ್ರಕರಣ 50ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಬಡ್ಡಿಯ ಜೊತೆಗೆ, ಕಾರಣ ಕೇಳುವ ಸೂಚನಾಪತ್ರವನ್ನು ನೀಡಿದ ಮೂವತ್ತು ದಿನಗಳ ಒಳಗಾಗಿ ಸಂದಾಯ ಮಾಡಿದರೆ, ದಂಡವನ್ನು ಸಂದಾಯ ಮಾಡತಕ್ಕದ್ದಲ್ಲ ಮತ್ತು ಸದರಿ ಸೂಚನಾ ಪತ್ರಕ್ಕೆ ಸಂಬಂಧಿಸಿದ ಎಲ್ಲಾ ನಡಾವಳಿಗಳು ಮುಕ್ತಾಯವಾಗಿವೆ ಎಂದು ಪರಿಭಾವಿಸತಕ್ಕದ್ದು.*

*(9) ತೆರಿಗೆಯ ಹೊಣೆಯನ್ನು ಹೊರಿಸಬಹುದಾದ ವ್ಯಕ್ತಿಯು ಮಾಡಿದ ವಿಜ್ಞಾಪನೆ ಯಾವುದಾದರು ಇದ್ದರೆ ಅದನ್ನು ಪರಿಗಣಿಸಿದ ನಂತರ, ಯುಕ್ತ ಅಧಿಕಾರಿಯು, ಅಂಥ ವ್ಯಕ್ತಿಯಿಂದ ಬಾಕಿಯಿರುವ ತೆರಿಗೆ, ಬಡ್ಡಿ ಮತ್ತು ತೆರಿಗೆಯ ಶೇಕಡಾ ಹತ್ತರಷ್ಟು ಅಥವಾ ಹತ್ತು ಸಾವಿರ ರೂಪಾಯಿಗಳು, ಇವುಗಳಲ್ಲಿ ಯಾವುದು ಹೆಚ್ಚೋ ಅದಕ್ಕೆ ಸಮನಾದ ದಂಡದ ಮೊತ್ತವನ್ನು ನಿರ್ಧರಿಸತಕ್ಕದ್ದು ಮತ್ತು ಒಂದು ಆದೇಶವನ್ನು ನೀಡತಕ್ಕದ್ದು.*

*(10) ತೆರಿಗೆಯನ್ನು ಸಂದಾಯ ಮಾಡದಿರುವುದು ಅಥವಾ ಕಡಿಮೆ ಸಂದಾಯ ಮಾಡಿರುವುದು ಅಥವಾ ಹೂಡುವಳಿ ತೆರಿಗೆ ಜಮೆಯನ್ನು ತಪ್ಪಾಗಿ ತೆಗೆದುಕೊಂಡಿರುವುದು ಅಥವಾ ಬಳಸಿರುವುದು ಇವುಗಳಿಗೆ ಸಂಬಂಧಿಸಿರುವ ವರ್ಷಕ್ಕೆ ವಾರ್ಷಿಕ ರಿಟರ್ನನ್ನು ಒದಗಿಸುವುದಕ್ಕೆ ಇರುವ ಗಡುವಿನ ದಿನಾಂಕದಿಂದ ಮೂರು ವರ್ಷದ ಒಳಗಾಗಿ, ಅಥವಾ ತಪ್ಪಿನಿಂದಾದ ಮರುಪಾವತಿಯ ದಿನಾಂಕದಿಂದ ಮೂರು ವರ್ಷದ ಒಳಗಾಗಿ ಯುಕ್ತ ಅಧಿಕಾರಿಯು ಉಪ-ಪ್ರಕರಣ (9)ರÀ ಅಡಿಯಲ್ಲಿ ಆದೇಶವನ್ನು ನೀಡತಕ್ಕದ್ದು.*

*(11) ಉಪಪ್ರಕರಣ (6) ಅಥವಾ ಉಪಪ್ರಕರಣ (8)ರಲ್ಲಿ ಏನೇ ಒಳಗೊಂಡಿದ್ದರೂ, ಸ್ವಯಂ-ನಿರ್ಧರಿತ ತೆರಿಗೆಯ ಯಾವುದೇ ಮೊತ್ತವನ್ನು ಅಥವಾ ತೆರಿಗೆಯಾಗಿ ಸಂಗ್ರಹಿಸಲಾಗಿರುವ ಯಾವುದೇ ಮೊತ್ತವನ್ನು ಅಂಥ ತೆರಿಗೆ ಸಂದಾಯದ ಗಡುವು ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಸಂದಾಯ ಮಾಡದಿದ್ದಲ್ಲಿ, ಉಪಪ್ರಕರಣ (9)ರ ಅಡಿಯಲ್ಲಿ ದಂಡವನ್ನು ಸಂದಾಯ ಮಾಡತಕ್ಕದ್ದು.*

**ಪ್ರಕರಣ 74 ಕೆಳಕಂಡಂತಿದೆ**

*74. ಮೋಸ ಅಥವಾ ಉದ್ದೇಶಪೂರ್ವಕವಾಗಿ ಸಂಗತಿಗಳನ್ನು ತಪ್ಪಾಗಿ ಹೇಳುವುದು ಅಥವಾ ಬಚ್ಚಿಡುವ ಯಾವುದೇ ಕಾರಣಗಳಿಗಾಗಿ ತೆರಿಗೆ ಸಂದಾಯ ಮಾಡದಿರುವ ಅಥವಾ ಕಡಿಮೆ ಸಂದಾಯ ಮಾಡಿದ ಅಥವಾ ತಪ್ಪಿನಿಂದ ಮಾಡಿದ ಮರುಪಾವತಿಯ ಅಥವಾ ತಪ್ಪಾಗಿ ತೆಗೆದುಕೊಂಡ ಅಥವಾ ಬಳಸಿದ ಹೂಡುವಳಿ ತೆರಿಗೆ ಜಮೆಯ ನಿರ್ಧರಣೆ.- (1) ತೆರಿಗೆಯನ್ನು ತಪ್ಪಿಸುವುದಕ್ಕಾಗಿ, ಮೋಸ ಅಥವಾ ಉದ್ದೇಶಪೂರ್ವಕವಾಗಿ ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳುವುದು ಅಥವಾ ಬಚ್ಚಿಡುವುದರ ಕಾರಣಗಳಿಗಾಗಿ, ಯಾವುದೇ ತೆರಿಗೆಯನ್ನು ಸಂದಾಯ ಮಾಡದಿರುವುದು ಅಥವಾ ಕಡಿಮೆ ಸಂದಾಯ ಮಾಡಿರುವುದು ಅಥವಾ ತಪ್ಪಿನಿಂದ ಮರುಪಾವತಿ ಮಾಡಿರುವುದು ಅಥವಾ ಹೂಡುವಳಿ ತೆರಿಗೆ ಜಮೆಯನ್ನು ತಪ್ಪಾಗಿ ತೆಗೆದುಕೊಂಡಿರುವುದು ಅಥವಾ ಬಳಸಿರುವುದು ಯುಕ್ತ ಅಧಿಕಾರಿಗೆ ಕಂಡುಬಂದಲ್ಲಿ, ಆತನು, ಹಾಗೆ ಸಂದಾಯ ಮಾಡದೇ ಇರುವ ಅಥವಾ ಹಾಗೆ ಕಡಿಮೆ ಸಂದಾಯ ಮಾಡಿರುವ ತೆರಿಗೆಯ ಹೊಣೆಯನ್ನು ಹೊರಿಸಬಹುದಾದÀ ವ್ಯಕ್ತಿಗೆ, ಅಥವಾ ಯಾರಿಗೆ ತಪ್ಪಿನಿಂದ ಮರುಪಾವತಿ ಮಾಡಲಾಗಿದೆಯೊ ಅಥವಾ ಯಾರು ಹೂಡುವಳಿ ತೆರಿಗೆ ಜಮೆಯನ್ನು ತಪ್ಪಾಗಿ ತೆಗೆದುಕೊಂಡಿರುವನೋ ಅಥವಾ ಬಳಸಿರುವನೋ ಅವನು, ಸೂಚನಾಪತ್ರದಲ್ಲಿ ನಿರ್ದಿಷ್ಟಪಡಿಸಿರುವ ಮೊತ್ತವನ್ನು ಅದರ ಮೇಲೆ ಪ್ರಕರಣ 50ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಬಡ್ಡಿ ಮತ್ತು ಸೂಚನಾ ಪತ್ರದಲ್ಲಿ ನಿರ್ದಿಷ್ಟಪಡಿಸಿದ ತೆರಿಗೆ ಮೊತಕ್ಕೆ ಸಮನಾದ ದಂಡದ ಜೊತೆಗೆ, ಏಕೆ ಸಂದಾಯ ಮಾಡಬಾರದು ಎನ್ನುವುದಕ್ಕೆ ಕಾರಣಗಳನ್ನು ತೋರಿಸುವಂತೆ ಅವನನ್ನು ಅಗತ್ಯಪಡಿಸಿ ಸೂಚನಾಪತ್ರವನ್ನು ನೀಡತಕ್ಕದ್ದು.*

*(2) ಯುಕ್ತ ಅಧಿಕಾರಿಯು, ಆದೇಶವನ್ನು ಹೊರಡಿಸುವುದಕ್ಕಾಗಿ ಉಪಪ್ರಕರಣ (10)ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಕಾಲಮಿತಿಗಿಂತ ಕೊನೆಯ ಪಕ್ಷ ಆರು ತಿಂಗಳು ಮುಂಚಿತವಾಗಿ ಉಪ-ಪ್ರಕರಣ (1)ರ ಅಡಿಯಲ್ಲಿ ಸೂಚನಾಪತ್ರವನ್ನು ನೀಡತಕ್ಕದ್ದು.*

(3) ಉಪಪ್ರಕರಣ (1)ರ ಅಡಿಯಲ್ಲಿ ಯಾವುದೇ ಅವಧಿಗಾಗಿ ಸೂಚನಾ ಪತ್ರವನ್ನು ನೀಡಲಾಗಿದ್ದಲ್ಲಿ, ಉಪಪ್ರಕರಣ (1)ರ ಅಡಿಯಲ್ಲಿ ವ್ಯಾಪ್ತವಾಗಿರುವ ಅವಧಿಗಳÀನ್ನು ಹೊರತುಪಡಿಸಿದ ಇತರ ಅಂಥ ಅವಧಿಗಳಿಗೆ, ಸಂದಾಯ ಮಾಡದಿರುವ ಅಥವಾ ಕಡಿಮೆ ಸಂದಾಯ ಮಾಡಿದ ತೆರಿಗೆಯ ಅಥವಾ ತಪ್ಪಿನಿಂದ ಮಾಡಿದ ಮರುಪಾವತಿಯ ಅಥವಾ ತಪ್ಪಾಗಿ ತೆಗೆದುಕೊಂಡ ಅಥವಾ ಬಳಸಿದ ಹೂಡುವಳಿ ತೆರಿಗೆ ಜಮೆಯ ವಿವರಗಳನ್ನು ಒಳಗೊಂಡ ಒಂದು ವಿವರಪತ್ರವನ್ನು, ಯುಕ್ತ ಅಧಿಕಾರಿಯು ತೆರಿಗೆಯ ಹೊಣೆಯನ್ನು ಹೊರಿಸಬಹುದಾದÀ ವ್ಯಕ್ತಿಗೆ ಜಾರಿ ಮಾಡಬಹುದು.

(4) ಉಪಪ್ರಕರಣ (1)ರ ಅಡಿಯಲ್ಲಿ ವ್ಯಾಪ್ತವಾಗಿರುವುದನ್ನು ಹೊರತುಪಡಿಸಿ, ತೆರಿಗೆಯನ್ನು ತಪ್ಪಿಸುವುದಕ್ಕಾಗಿ, ಮೋಸ ಅಥವಾ ಉದ್ದೇಶಪೂರ್ವಕವಾಗಿ ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳುವುದು ಅಥವಾ ಬಚ್ಚಿಡುವ ಆಧಾರಾಂಶಗಳಲ್ಲದೇ, ಸದರಿ ವಿವರಪತ್ರದಲ್ಲಿ ಅಂಥ ತೆರಿಗೆ ಅವಧಿಗಳಿಗಾಗಿ ಆಧರಿಸಿರುವ ಕಾರಣಾಧಾರಗಳು, ಮುಂಚಿನ ಸೂಚನಾಪತ್ರದಲ್ಲಿ ನಮೂದಿಸಲಾಗಿರುವವೇ ಆಗಿವೆ ಎನ್ನುವ ಷರತ್ತಿಗೆ ಒಳಪಟ್ಟು, ಉಪ-ಪ್ರಕರಣ (3)ರ ಅಡಿಯಲ್ಲಿ ವಿವರಪತ್ರದ ಜಾರಿ ಮಾಡುವಿಕೆಯನ್ನು, ಪ್ರಕರಣ 73ರ ಉಪಪ್ರಕರಣ (1)ರ ಅಡಿಯಲ್ಲಿ ಅಂಥ ವ್ಯಕ್ತಿಗೆ ಜಾರಿ ಮಾಡಿದ ಸೂಚನಾ ಪತ್ರ ಎಂದು ಪರಿಭಾವಿಸತಕ್ಕದ್ದು.

(5) ತೆರಿಗೆಯ ಹೊಣೆಯನ್ನು ಹೊರಿಸಬಹುದಾದ ವ್ಯಕ್ತಿಯು, ಉಪ-ಪ್ರಕರಣ (1)ರ ಅಡಿಯಲ್ಲಿನ ಸೂಚನಾ ಪತ್ರವನ್ನು ಜಾರಿ ಮಾಡುವುದಕ್ಕೆ ಮೊದಲೇ, ಸ್ವ-ನಿಶ್ಚಿತಪಡಿಸಿಕೊಂಡಿರುವುದರ ಆಧಾರದ ಮೇಲಿನ ಅಂಥ ತೆರಿಗೆಯ ಮೊತ್ತವನ್ನು ಅಥವಾ ಯುಕ್ತ ಅಧಿಕಾರಿಯಿಂದ ನಿಶ್ಚಿತಪಡಿಸಿದ ತೆರಿಗೆಯ ಮೊತ್ತವನ್ನು, ಅದರ ಮೇಲೆ ಪ್ರಕರಣ 50ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಬಡ್ಡಿ ಮತ್ತು ಅಂಥ ತೆರಿಗೆಯ ಶೇಕಡ ಹದಿನೈದಕ್ಕೆ ಸಮನಾದ ದಂಡದೊಂದಿಗೆ ಸಂದಾಯ ಮಾಡುವುದು ಮತ್ತು ಅಂಥ ಸಂದಾಯದ ಮಾಹಿತಿಯನ್ನು ಯುಕ್ತ ಅಧಿಕಾರಿಗೆ ಲಿಖಿತವಾಗಿ ತಿಳಿಸುವುದು.

(6) ಅಂಥ ಮಾಹಿತಿಯ ಸ್ವೀಕೃತಿಯ ಮೇರೆಗೆ, ಯುಕ್ತ ಅಧಿಕಾರಿಯು, ಹಾಗೆ ಸಂದಾಯ ಮಾಡಲಾದ ತೆರಿಗೆ ಅಥವಾ ಈ ಅಧಿನಿಯಮದ ಅಡಿಯಲ್ಲಿ ಅಥವಾ ಇದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ದಂಡಕ್ಕೆ ಸಂಬಂಧಿಸಿದಂತೆ, ಉಪಪ್ರಕರಣ (1)ರ ಅಡಿಯಲ್ಲಿ ಸೂಚನಾ ಪತ್ರವನ್ನು ಜಾರಿ ಮಾಡತಕ್ಕದ್ದಲ್ಲ.

(7) ಉಪಪ್ರಕರಣ (5)ರ ಅಡಿಯಲ್ಲಿ ಸಂದಾಯ ಮಾಡಲಾದ ಮೊತ್ತವು, ವಾಸ್ತವಿಕವಾಗಿ ಸಂದಾಯ ಮಾಡಬೇಕಾದ ಮೊತ್ತಕ್ಕಿಂತ ಕಡಿಮೆಯಿದೆ ಎಂದು ಯುಕ್ತ ಅಧಿಕಾರಿಯು ಅಭಿಪ್ರಾಯವನ್ನು ಹೊಂದಿದ್ದಲ್ಲಿ, ಅವನು ವಾಸ್ತವಿಕವಾಗಿ ಸಂದಾಯ ಮಾಡಬೇಕಾದ ಮೊತ್ತಕ್ಕಿಂತ ಕಡಿಮೆಯಿರುವ ಅಂಥ ಮೊತ್ತಕ್ಕೆ ಸಂಬಂಧಿಸಿದಂತೆ ಉಪಪ್ರಕರಣ (1)ರಲ್ಲಿ ಉಪಬಂಧಿಸಿದಂತೆ ಸೂಚನಾ ಪತ್ರವನ್ನು ನೀಡಲು ಮುಂದುವರೆಯತಕ್ಕದ್ದು.

(8) ಉಪಪ್ರಕರಣ (1)ರ ಅಡಿಯಲ್ಲಿ ತೆರಿಗೆಯ ಹೊಣೆಯನ್ನು ಹೊರಿಸಬಹುದಾದ ವ್ಯಕ್ತಿಯು, ಸದರಿ ತೆರಿಗೆಯನ್ನು ಪ್ರಕರಣ 50ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಬಡ್ಡಿಯ ಮತ್ತು ಅಂಥ ತೆರಿಗೆಯ ಶೇಕಡಾ ಇಪ್ಪತ್ತೈದಕ್ಕೆ ಸಮನಾದ ದಂಡದೊಂದಿಗೆ, ಕಾರಣ ಕೇಳುವ ಸೂಚನಾಪತ್ರವನ್ನು ನೀಡಿದ ಮೂವತ್ತು ದಿನಗಳ ಒಳಗಾಗಿ ಸಂದಾಯ ಮಾಡಿದರೆ, ಸದರಿ ಸೂಚನಾ ಪತ್ರಕ್ಕೆ ಸಂಬಂಧಿಸಿದ ಎಲ್ಲಾ ನಡಾವಳಿಗಳು ಮುಕ್ತಾಯವಾಗಿವೆ ಎಂದು ಪರಿಭಾವಿಸತಕ್ಕದ್ದು.

(9) ತೆರಿಗೆಯ ಹೊಣೆಯನ್ನು ಹೊರಿಸಬಹುದಾದ ವ್ಯಕ್ತಿಯು ಮಾಡಿದ ವಿಜ್ಞಾಪನೆ ಯಾವುದಾದರೂ ಇದ್ದರೆ ಅದನ್ನು ಪರಿಗಣಿಸಿದ ನಂತರ, ಯುಕ್ತ ಅಧಿಕಾರಿಯು, ಅಂಥ ವ್ಯಕ್ತಿಯಿಂದ ಬಾಕಿಯಿರುವ ತೆರಿಗೆ, ಬಡ್ಡಿ ಮತ್ತು ದಂಡದ ಮೊತ್ತವನ್ನು ನಿರ್ಧರಿಸತಕ್ಕದ್ದು ಮತ್ತು ಒಂದು ಆದೇಶವನ್ನು ನೀಡತಕ್ಕದ್ದು.

(10) ತೆರಿಗೆಯನ್ನು ಸಂದಾಯ ಮಾಡದಿರುವುದು ಅಥವಾ ಕಡಿಮೆ ಸಂದಾಯ ಮಾಡಿರುವುದು ಅಥವಾ ಹೂಡುವಳಿ ತೆರಿಗೆ ಜಮೆಯನ್ನು ತಪ್ಪಾಗಿ ತೆಗೆದುಕೊಂಡಿರುವುದು ಅಥವಾ ಬಳಸಿರುವುದು ಇವುಗಳಿಗೆ ಸಂಬಂಧಿಸಿರುವ ವರ್ಷಕ್ಕೆ ವಾರ್ಷಿಕ ರಿಟರ್ನನ್ನು ಒದಗಿಸುವುದಕ್ಕೆ ಇರುವ ಗಡುವಿನ ದಿನಾಂಕದಿಂದ ಐದು ವರ್ಷದ ಒಳಗಾಗಿ, ಅಥವಾ ತಪ್ಪಿನಿಂದಾದ ಮರುಪಾವತಿಯ ದಿನಾಂಕದಿಂದ ಐದು ವರ್ಷದ ಒಳಗಾಗಿ ಯುಕ್ತ ಅಧಿಕಾರಿಯು ಉಪಪ್ರಕರಣ (9)ರÀ ಅಡಿಯಲ್ಲಿ ಆದೇಶವನ್ನು ನೀಡತಕ್ಕದ್ದು.

(11) ಉಪಪ್ರಕರಣ (9)ರ ಅಡಿಯಲ್ಲಿ ಹೊರಡಿಸಿದ ಒಂದು ಆದೇಶವನ್ನು ಜಾರಿಗೊಳಿಸಲಾದ ಯಾವೊಬ್ಬ ವ್ಯಕ್ತಿಯು, ಆದೇಶವನ್ನು ತಿಳಿಸಿದ ಮೂವತ್ತು ದಿನಗಳ ಒಳಗಾಗಿ, ತೆರಿಗೆಯನ್ನು ಅದರಮೇಲೆ ಪ್ರಕರಣ 50ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಬಡ್ಡಿ ಮತ್ತು ಅಂಥ ತೆರಿಗೆಯ ಶೇಕಡಾ ಐವತ್ತಕ್ಕೆ ಸಮನಾದ ದಂಡದೊಂದಿಗೆ ಸಂದಾಯ ಮಾಡಿದ್ದಲ್ಲಿ, ಸದರಿ ತೆರಿಗೆಗೆ ಸಂಬಂಧಿಸಿದ ಎಲ್ಲಾ ನಡಾವಳಿಗಳು ಮುಕ್ತಾಯವಾಗಿವೆ ಎಂದು ಪರಿಭಾವಿಸತಕ್ಕದ್ದು.

ವಿವರಣೆ 1:- ಪ್ರಕರಣ 73 ಮತ್ತು ಈ ಪ್ರಕರಣದ ಉದ್ದೇಶಗಳಿಗಾಗಿ,-

(i) ಪದಾವಳಿಯಾದ "ಸದರಿ ಸೂಚನಾಪತ್ರಕ್ಕೆ ಸಂಬಂಧಿಸಿದ ಎಲ್ಲಾ ನಡಾವಳಿಗಳು" ಎನ್ನುವುದು ಪ್ರಕರಣ 132ರ ಅಡಿಯಲ್ಲಿನ ನಡಾವಳಿಗಳನ್ನು ಒಳಗೊಳ್ಳತಕ್ಕದ್ದಲ್ಲ;

*(ii) ತೆರಿಗೆ ಸಂದಾಯ ಮಾಡಲು ಬಾಧ್ಯನಿರುವ ಮುಖ್ಯ ವ್ಯಕ್ತಿಗೆ ಮತ್ತು ಕೆಲವು ಇತರ ವ್ಯಕ್ತಿಗಳಿಗೆ ಅದೇ ನಡಾವಳಿಗಳ ಅಡಿಯಲ್ಲಿ ಸೂಚನಾ ಪತ್ರವನ್ನು ನೀಡಿದ್ದು, ಮತ್ತು ಮುಖ್ಯ ವ್ಯಕ್ತಿಗೆ ಪ್ರತಿಯಾದ ಅಂಥ ನಡಾವಳಿಗಳು, ಪ್ರಕರಣ 73 ಅಥವಾ ಪ್ರಕರಣ 74ರ ಅಡಿಯಲ್ಲಿ ಮುಕ್ತಾಯಗೊಳಿಸಲಾಗಿದ್ದಲ್ಲಿ, ಪ್ರಕರಣ 122, 125, 129 ಮತ್ತು 130ಗಳ ಅಡಿಯಲ್ಲಿ ದಂಡವನ್ನು ಸಂದಾಯ ಮಾಡುವುದಕ್ಕೆ ಬಾಧ್ಯರಿರುವ ಎಲ್ಲಾ ವ್ಯಕ್ತಿಗಳ ವಿರುದ್ಧವಾದ ನಡಾವಳಿಗಳು ಮುಕ್ತಾಯವಾಗಿವೆ ಎಂದು ಪರಿಭಾವಿಸತಕ್ಕದ್ದು.*

*ವಿವರಣೆ 2:- ಈ ಅಧಿನಿಯಮದ ಉದ್ದೇಶಗಳಿಗಾಗಿ "ಬಚ್ಚಿಡುವುದು" ಎಂಬ ಪದಾವಳಿಯನ್ನು, ಒಬ್ಬ ತೆರಿಗೆದಾಯಕ ವ್ಯಕ್ತಿಯು ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ಒದಗಿಸಬೇಕಾದ ರಿಟರ್ನ್, ವಿವರಪತ್ರ, ಅಥವಾ ಯಾವುದೇ ಇತರ ದಸ್ತಾವೇಜುಗಳಲ್ಲಿ ಘೋಷಿಸುವುದಕ್ಕೆ ಅಗತ್ಯವಿರುವಂತಹ, ಸಂಗತಿಗಳನ್ನು ಅಥವಾ ಮಾಹಿತಿಯನ್ನು ಘೋಷಿಸದಿರುವುದು ಅಥವಾ ಯುಕ್ತ ಅಧಿಕಾರಿಯಿಂದ ಲಿಖಿತರೂಪದಲ್ಲಿ ಕೇಳಲಾದ ಯಾವುದೇ ಮಾಹಿತಿಯನ್ನು ಒದಗಿಸಲು ವಿಫಲವಾಗುವುದು ಎಂದು ಅರ್ಥೈಸತಕ್ಕದ್ದು.*

*(8) ಮುರುಗಡೆದಾರನಿಗೆ ಅಥವಾ ಮುರುಗಡೆಗೊಳಗಾದವನಿಗೆ, ಅಧಿಕವಾದ ಅಥವಾ ತಪ್ಪಾದ ಮುರುಗಡೆಯ ಪ್ರಯುಕ್ತ ಉದ್ಭವಿಸಿರುವ ಮರುಪಾವತಿಯನ್ನು ಪ್ರಕರಣ 54ರ ಉಪಬಂಧಗಳಿಗೆ ಅನುಸಾರವಾಗಿ ವ್ಯವಹರಿಸತಕ್ಕದ್ದು:*

**ಪ್ರಕರಣ 54 ಕೆಳಕಂಡಂತಿದೆ**

*54. ತೆರಿಗೆಯ ಮರುಪಾವತಿ.- (1) ಯಾವುದೇ ತೆರಿಗೆಯ ಮತ್ತು ಅಂಥ ತೆರಿಗೆ ಅಥವಾ ಆತನಿಂದ ಸಂದಾಯವಾದ ಯಾವುದೇ ಇತರ ಮೊತ್ತಗಳ ಮೇಲೆ ಸಂದಾಯ ಮಾಡಿದ ಬಡ್ಡಿ, ಯಾವುದಾದರೂ ಇದ್ದರೆ, ಅವುಗಳ ಮರುಪಾವತಿಯನ್ನು ಕ್ಲೇಮು ಮಾಡುವ ಯಾವೊಬ್ಬ ವ್ಯಕ್ತಿಯು, ಸಂಬಂಧಿಸಿದ ದಿನಾಂಕದಿಂದ ಎರಡು ವರ್ಷಗಳ ಮುಕ್ತಾಯದ ಮೊದಲು ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ಅಂಥ ವಿಧಾನದಲ್ಲಿ ಒಂದು ಅರ್ಜಿಯನ್ನು ಹಾಕಬಹುದು:*

*ಪರಂತು, ಪ್ರಕರಣ 49ರ ಉಪಪ್ರಕರಣ (6)ರ ಉಪಬಂಧಗಳಿಗೆ ಅನುಸಾರವಾಗಿ ವಿದ್ಯುನ್ಮಾನ ನಗದು ಖಾತೆಯಲ್ಲಿನ ಯಾವುದೇ ಉಳಿಕೆಯ ಮರುಪಾವತಿಯನ್ನು ಕ್ಲೇಮು ಮಾಡುವ ಒಬ್ಬ ನೋಂದಾಯಿತ ವ್ಯಕ್ತಿಯು, ಪ್ರಕರಣ 39ರ ಅಡಿಯಲ್ಲಿ ಒದಗಿಸಿದ ರಿಟರ್ನನಲ್ಲಿ ನಿಯಮಿಸಬಹುದಾದ ಅಂಥ ವಿಧಾನಲ್ಲಿ ಅಂಥ ಮರುಪಾವತಿಯನ್ನು ಕ್ಲೇಮು ಮಾಡಬಹುದು.*

*(2) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಳಮುಖ ಪೂರೈಕೆಗಳ ಮೇಲೆ ಸಂದಾಯ ಮಾಡಿದ ರಾಜ್ಯ ತೆರಿಗೆಯ ಮರುಪಾವತಿಗೆ ಹಕ್ಕುಳ್ಳ ಸಂಯುಕ್ತ ರಾಷ್ಟ್ರ ಸಂಘದ ಯಾವುದೇ ವಿಶೇಷ ಏಜೆನ್ಸಿ ಅಥವಾ ಸಂಯುಕ್ತ ರಾಷ್ಟ್ರ (ವಿಶೇಷ ಸ್ಥಾನಮಾನ ಮತ್ತು ಉನ್ಮುಕ್ತಿಗಳು) ಅಧಿನಿಯಮ, 1947ರ (1947ರ ಕೇಂದ್ರ ಅಧಿನಿಯಮ 46) ಅಡಿಯಲ್ಲಿ ಅಧಿಸೂಚಿಸಿದ ಯಾವುದೇ ಬಹುಪಕ್ಷೀಯ ಹಣಕಾಸಿನ ಸಂಸ್ಥೆ ಮತ್ತು ಸಂಘಟನೆ, ವಿದೇಶಗಳ ಕಾನ್ಸುಲೇಟ್ ಅಥವಾ ರಾಯಭಾರಿ ಕಛೇರಿ ಅಥವಾ ಪ್ರಕರಣ 55ರ ಅಡಿಯಲ್ಲಿ ಅಧಿಸೂಚಿಸಿದ ಯಾವುದೇ ಇತರ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗ, ಅಂಥ ಪೂರೈಕೆಯನ್ನು ಸ್ವೀಕರಿಸಿದ ತ್ರೈಮಾಸಿಕದ ಕೊನೆಯ ದಿನದಿಂದ ಆರು ತಿಂಗಳುಗಳು ಮುಗಿಯುವ ಮೊದಲು, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ಅಂಥ ವಿಧಾನದಲ್ಲಿ ಅಂಥ ಮರುಪಾವತಿಗಾಗಿ ಅರ್ಜಿಯನ್ನು ಹಾಕಬಹುದು.*

*(3) ಉಪಪ್ರಕರಣ (10)ರ ಉಪಬಂಧಗಳಿಗೆ ಒಳಪಟ್ಟು, ಒಬ್ಬ ನೋಂದಾಯಿತ ವ್ಯಕ್ತಿಯು, ಯಾವುದೇ ತೆರಿಗೆ ಅವಧಿಯ ಕೊನೆಯಲ್ಲಿ ಬಳಕೆಯಾಗದ ಯಾವುದೇ ಹೂಡುವಳಿ ತೆರಿಗೆ ಜಮೆಯ ಮರುಪಾವತಿಯನ್ನು ಕ್ಲೇಮು ಮಾಡಬಹುದು:*

*ಪರಂತು, ಬಳಕೆಯಾಗದ ಯಾವುದೇ ಹೂಡುವಳಿ ತೆರಿಗೆ ಜಮೆಯ ಮರುಪಾವತಿಗೆ ಈ ಕೆಳಕಂಡ ಸಂದರ್ಭಗಳನ್ನು ಹೊರತುಪಡಿಸಿದಂತೆ ಅವಕಾಶ ನೀಡತಕ್ಕದ್ದಲ್ಲ-*

*(i) ತೆರಿಗೆ ಸಂದಾಯವಿಲ್ಲದೆ ಮಾಡಿದ ಶೂನ್ಯ ದರದ ಪೂರೈಕೆಗಳು;*

*(ii) ಪರಿಷತ್ತಿನ ಶಿಫಾರಸ್ಸಿನ ಅನ್ವಯ ಸರ್ಕಾರ ಅಧಿಸೂಚಿಸಬಹುದಾದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗಳನ್ನು ಹೊರತುಪಡಿಸಿದಂತೆ ಹುಟ್ಟುವಳಿ ಪೂರೈಕೆಗಳ ಮೇಲಿನ ತೆರಿಗೆ ದರಕ್ಕಿಂತ ಹೂಡುವಳಿಗಳ ಮೇಲಿನ ತೆರಿಗೆ ದರ ಹೆಚ್ಚಿರುವ (ದರವಿಲ್ಲದ ಅಥವಾ ಸಂಪೂರ್ಣ ವಿನಾಯಿತಿ ಪೂರೈಕೆಗಳನ್ನು ಹೊರತುಪಡಿಸಿದಂತೆ) ಕಾರಣಕ್ಕಾಗಿ ಜಮೆಯು ಸಂಚಿತಗೊಂಡಿರುವುದು:*

ಮತ್ತು ಪರಂತು, ಭಾರತದಿಂದ ಹೊರಗಡೆಗೆ ರಫ್ತಾದ ಸರಕುಗಳು ರಫ್ತು ಸುಂಕಕ್ಕೆ ಒಳಪಟ್ಟಿರುವ ಸಂದರ್ಭಗಳಲ್ಲಿ ಬಳಕೆಯಾಗದ ಯಾವುದೇ ಹೂಡುವಳಿ ತೆರಿಗೆ ಜಮೆಯ ಮರುಪಾವತಿಗೆ ಅವಕಾಶ ನೀಡತಕ್ಕದ್ದಲ್ಲ:

ಅಲ್ಲದೇ ಪರಂತು, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆದಾರನು ಅಂಥ ಪೂರೈಕೆಗಳ ಮೇಲೆ ಸಂದಾಯ ಮಾಡಿದ ಏಕೀಕೃತ ತೆರಿಗೆಯ ಮರುಪಾವತಿಯನ್ನು ಕ್ಲೇಮು ಮಾಡಿದ್ದರೆ, ಹೂಡುವಳಿ ತೆರಿಗೆ ಜಮೆಯ ಮರುಪಾವತಿಗೆ ಅವಕಾಶ ನೀಡತಕ್ಕದ್ದಲ್ಲ.

(4) ಅರ್ಜಿಯು ಕೆಳಕಂಡವುಗಳಿಂದ ಜೊತೆಗೂಡಿರತಕ್ಕದ್ದು;-

(ಎ) ಅರ್ಜಿದಾರನಿಗೆ ಮರುಪಾವತಿಯು ಬಾಕಿ ಇದೆ ಎನ್ನುವುದನ್ನು ಸ್ಥಾಪಿಸುವುದಕ್ಕಾಗಿ ನಿಯಮಿಸಬಹುದಾದ ಅಂಥ ದಸ್ತಾವೇಜು ಪುರಾವೆಗಳು; ಮತ್ತು

(ಬಿ) ಅಂಥ ಕ್ಲೇಮು ಮಾಡಿದÀ ಮರುಪಾವತಿಗೆ ಸಂಬಂಧಿಸಿದಂತೆ, ಆತನಿಂದ ಸಂಗ್ರಹ ಮಾಡಿದ ಅಥವಾ ಆತನು ಸಂದಾಯ ಮಾಡಿದ ತೆರಿಗೆಯ ಮೊತ್ತ ಅಥವಾ ಅಂಥ ತೆರಿಗೆ ಅಥವಾ ಯಾವುದೇ ಇತರ ಮೊತ್ತಗಳ ಮೇಲೆ ಸಂದಾಯ ಮಾಡಿದ ಬಡ್ಡಿ, ಯಾವುದಾದರೂ ಇದ್ದರೆ, ಅಂಥ ತೆರಿಗೆ ಹಾಗೂ ಬಡ್ಡಿಯ ಹೊರೆಯನ್ನು ಯಾವುದೇ ಇತರ ವ್ಯಕ್ತಿಗೆ ವರ್ಗಾಯಿಸಿಲ್ಲ ಎನ್ನುವುದನ್ನು ಸ್ಥಾಪಿಸುವುದಕ್ಕಾಗಿ ಅರ್ಜಿದಾರನು ಒದಗಿಸಬಹುದಾದ ಅಂಥ ದಸ್ತಾವೇಜುಗಳು ಮತ್ತು ಇತರ ಪುರಾವೆಗಳು (ಪ್ರಕರಣ 33ರಲ್ಲಿ ಉಲ್ಲೇಖಿಸಲಾದ ದಸ್ತಾವೇಜುಗಳನ್ನು ಒಳಗೊಂಡಂತೆ):

ಪರಂತು, ಮರುಪಾವತಿ ಎಂದು ಕ್ಲೇಮು ಮಾಡಿರುವ ಮೊತ್ತವು ಎರಡು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿದ್ದಲ್ಲಿ, ಅರ್ಜಿದಾರನು ಯಾವುದೇ ದಸ್ತಾವೇಜುಗಳು ಮತ್ತು ಇತರ ಪುರಾವೆಗಳನ್ನು ಒದಗಿಸುವುದು ಅವಶ್ಯಕವಿರತಕ್ಕದ್ದಲ್ಲ, ಆದರೆ ಅದಕ್ಕೆ ಬದಲಾಗಿ ಅವನ ಬಳಿ ಲಭ್ಯವಿರುವ ದಸ್ತಾವೇಜುಗಳು ಮತ್ತು ಇತರ ಪುರಾವೆಗಳ ಆಧಾರದ ಮೇಲೆ, ಅಂಥ ತೆರಿಗೆ ಹಾಗೂ ಬಡ್ಡಿಯ ಹೊರೆಯನ್ನು ಯಾವೊಬ್ಬ ಇತರ ವ್ಯಕ್ತಿಗೆ ವರ್ಗಾಯಿಸಿಲ್ಲ ಎಂದು ಪ್ರಮಾಣೀಕರಿಸುವ ಒಂದು ಘೋಷಣೆಯನ್ನು ಅವನು ಸಲ್ಲಿಸಬಹುದು.

(5) ಅಂಥ ಯಾವುದೇ ಅರ್ಜಿಯನ್ನು ಸ್ವೀಕರಿಸಿದಾಗ, ಮರುಪಾವತಿಯನ್ನಾಗಿ ಕ್ಲೇಮು ಮಾಡಿರುವ ಮೊತ್ತದ ಪೂರ್ಣ ಅಥವಾ ಭಾಗವನ್ನು ಮರುಪಾವತಿ ಮಾಡಬಹುದು ಎಂದು ಯುಕ್ತ ಅಧಿಕಾರಿಯು ಮನದಟ್ಟು ಮಾಡಿಕೊಂಡರೆ, ಆತನು ಅದಕ್ಕನುಸಾರವಾಗಿ ಆದೇಶ ಮಾಡಬಹುದು ಮತ್ತು ಹಾಗೆ ನಿರ್ಧರಿಸಿದ ಮೊತ್ತವು ಪ್ರಕರಣ 57ರಲ್ಲಿ ಉಲ್ಲೇಖಿಸಿದ ನಿಧಿಗೆ ಜಮೆಗೊಳ್ಳತಕ್ಕದ್ದು.

(6) ಉಪಪ್ರಕರಣ (5)ರಲ್ಲಿ ಏನೇ ಒಳಗೊಂಡಿದ್ದರೂ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರವು ಅಧಿಸೂಚಿಸಬಹುದಾದ ಅಂಥ ನೋಂದಾಯಿತ ವ್ಯಕ್ತಿಗಳ ವರ್ಗವನ್ನು ಹೊರತುಪಡಿಸಿದ ನೋಂದಾಯಿತ ವ್ಯಕ್ತಿಗಳಿಂದ, ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಶೂನ್ಯ-ದರ ಪೂರೈಕೆಯ ಪ್ರಯುಕ್ತ ಮರುಪಾವತಿಗಾಗಿ ಮಾಡಿರುವ ಯಾವುದೇ ಕ್ಲೇಮಿನ ಸಂದರ್ಭದಲ್ಲಿ, ಯುಕ್ತ ಅಧಿಕಾರಿಯು, ತಾತ್ಕಾಲಿಕವಾಗಿ ಅಂಗೀಕರಿಸಿದ ಹೂಡುವಳಿ ತೆರಿಗೆ ಜಮೆಯ ಮೊತ್ತವನ್ನು ಹೊರತುಪಡಿಸಿದಂತೆ, ಹಾಗೆ ಕ್ಲೇಮು ಮಾಡಿದ ಒಟ್ಟು ಮೊತ್ತದ ಶೇಕಡಾ ತೊಂಬತ್ತರಷ್ಟನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳು, ಮಿತಿಗಳು ಮತ್ತು ರಕ್ಷಣೋಪಾಯಗಳಿಗೆ ಒಳಪಟ್ಟು ತಾತ್ಕಾಲಿಕವಾಗಿ ಮರುಪಾವತಿ ಮಾಡಬಹುದು ಮತ್ತು ತದನಂತರ ಅರ್ಜಿದಾರನಿಂದ ಒದಗಿಸಿದ ದಸ್ತಾವೇಜುಗಳ ಯುಕ್ತ ಪರಿಶೀಲನೆಯ ನಂತರ ಮರುಪಾವತಿ ಕ್ಲೇಮಿನ ಅಂತಿಮ ಇತ್ಯರ್ಥಕ್ಕಾಗಿ ಉಪಪ್ರಕರಣ (5)ರ ಅಡಿಯಲ್ಲಿ ಆದೇಶ ಮಾಡುಬಹುದು.

(7) ಎಲ್ಲಾ ವಿಧದಲ್ಲಿಯೂ ಪೂರ್ಣವಾದ ಅರ್ಜಿ ಸ್ವೀಕೃತಿ ದಿನಾಂಕದಿಂದ ಅರವತ್ತು ದಿನಗಳ ಒಳಗಾಗಿ ಯುಕ್ತ ಅಧಿಕಾರಿಯು ಉಪಪ್ರಕರಣ (5)ರ ಅಡಿಯಲ್ಲಿ ಆದೇಶವನ್ನು ಹೊರಡಿಸತಕ್ಕದ್ದು.

(8) ಉಪಪ್ರಕರಣ (5)ರಲ್ಲಿ ಏನೇ ಒಳಗೊಂಡಿದ್ದರೂ, ಮರುಪಾವತಿ ಮಾಡಬಹುದಾದ ಮೊತ್ತವು ಈ ಕೆಳಗಿನವುಗಳಿಗೆ ಸಂಬಂಧಿಸಿದ್ದರೆ, ಅಂಥ ಮೊತ್ತವನ್ನು ನಿಧಿಗೆ ಜಮೆಗೊಳಿಸುವುದಕ್ಕೆ ಬದಲಾಗಿ, ಅರ್ಜಿದಾರನಿಗೆ ಸಂದಾಯ ಮಾಡತಕ್ಕದ್ದು,-

(ಎ) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಶೂನ್ಯ-ದರದ ಪೂರೈಕೆಗಳ ಮೇಲೆ ಸಂದಾಯ ಮಾಡಿದ ತೆರಿಗೆ ಅಥವಾ ಅಂಥ ಶೂನ್ಯ-ದರದ ಪೂರೈಕೆಗಳನ್ನು ಮಾಡುವಲ್ಲಿ ಬಳಕೆಯಾದ ಹೂಡುವಳಿಗಳು ಹಾಗೂ ಹೂಡುವಳಿ ಸೇವೆಗಳ ಮೇಲಿನ ತೆರಿಗೆಯ ಮರುಪಾವತಿ;

(ಬಿ) ಉಪಪ್ರಕರಣ (3)ರ ಅಡಿಯಲ್ಲಿ ಬಳಕೆಯಾಗದ ಹೂಡುವಳಿ ತೆರಿಗೆ ಜಮೆಯ ಮರುಪಾವತಿ;

(ಸಿ) ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾದರೂ ಒದಗಿಸದೇ ಇರುವಂತಹ ಮತ್ತು ಅದಕ್ಕಾಗಿ ಬೆಲೆಪಟ್ಟಿಯನ್ನು ನೀಡಿಲ್ಲದಿರುವ ಅಥವಾ ಮರುಪಾವತಿಯ ವೋಚರನ್ನು ನೀಡಲಾಗಿರುವ ಪೂರೈಕೆಯ ಮೇಲೆ ಸಂದಾಯ ಮಾಡಿದ ತೆರಿಗೆಯ ಮರುಪಾವತಿ;

(ಡಿ) ಪ್ರಕರಣ 77ರ ಅನುಸಾರವಾದ ತೆರಿಗೆಯ ಮರುಪಾವತಿ;

(ಇ) ಅಂಥ ತೆರಿಗೆ ಮತ್ತು ಬಡ್ಡಿಯ ಹೊರೆಯನ್ನು ಅವನು ಯಾವುದೇ ಇತರ ವ್ಯಕ್ತಿಗೆ ವರ್ಗಾಯಿಸಿರದಿದ್ದರೆ, ಅರ್ಜಿದಾರನಿಂದ ಸಂದಾಯ ಮಾಡಿದ ತೆರಿಗೆ ಮತ್ತು ಬಡ್ಡಿ, ಯಾವುದಾದರೂ ಇದ್ದರೆ, ಅಥವಾ ಇತರ ಯಾವುದೇ ಮೊತ್ತ; ಅಥವಾ

(ಎಫ್) ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂಥ ಯಾವುದೇ ಇತರ ಅರ್ಜಿದಾರರ ವರ್ಗದಿಂದ ಹೊತ್ತುಕೊಂಡ ತೆರಿಗೆ ಅಥವಾ ಬಡ್ಡಿ.

(9) ಅಪೀಲು ನ್ಯಾಯಾಧಿಕರಣ ಅಥವಾ ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು, ಡಿಕ್ರಿ, ಆದೇಶ ಅಥವಾ ನಿರ್ದೇಶನದಲ್ಲಿ ಅಥವಾ ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಯಾವುದೇ ಇತರ ಉಪಬಂಧಗಳಲ್ಲಿ, ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ ಸಹ, ಉಪಪ್ರಕರಣ (8)ರ ಉಪಬಂಧಗಳಿಗೆ ಅನುಸಾರವಾಗಿರುವುದರ ಹೊರತಾಗಿ ಮರುಪಾವತಿ ಮಾಡತಕ್ಕದ್ದಲ್ಲ.

(10) ಯಾವುದಾದರೂ ರಿಟರ್ನನ್ನು ಒದಗಿಸಲು ತಪ್ಪಿರುವ ಅಥವಾ ನಿರ್ದಿಷ್ಟಪಡಿಸಿದ ದಿನಾಂಕದೊಳಗೆ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಅಪೀಲು ಪ್ರಾಧಿಕಾರದಿಂದ ತಡೆ ಇರದಂತಹ ಯಾವುದೇ ತೆರಿಗೆ, ಬಡ್ಡಿ ಅಥವಾ ದಂಡವನ್ನು ಸಂದಾಯ ಮಾಡುವುದು ಅಗತ್ಯವಿರುವಂತಹ ನೋಂದಾಯಿತ ವ್ಯಕ್ತಿಗೆ, ಉಪಪ್ರಕರಣ (3)ರ ಅಡಿಯಲ್ಲಿ ಯಾವುದೇ ಮರುಪಾವತಿಯು ಬಾಕಿಯಿದ್ದಲ್ಲಿ, ಯುಕ್ತ ಅಧಿಕಾರಿಯು,-

(ಎ) ಸದರಿ ವ್ಯಕ್ತಿಯು ರಿಟರ್ನನ್ನು ಒದಗಿಸುವವರೆಗೆ ಅಥವಾ ತೆರಿಗೆ, ಬಡ್ಡಿ ಅಥವಾ ಸಂದರ್ಭಾನುಸಾರವಾಗಿ ದಂಡವನ್ನು ಸಂದಾಯ ಮಾಡುವವರೆಗೆ ಬಾಕಿಯಿರುವ ಮರುಪಾವತಿಯ ಸಂದಾಯವನ್ನು ತಡೆಹಿಡಿಯಬಹುದು;

(ಬಿ) ತೆರಿಗೆದಾಯಕ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿ ಅಥವಾ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಸಂದಾಯ ಮಾಡುವುದಕ್ಕೆ ಬಾಧ್ಯನಾಗಿರುವ ಆದರೆ ಸಂದಾಯವಾಗದೆ ಬಾಕಿ ಉಳಿದಿರುವ ಯಾವುದೇ ತೆರಿಗೆ, ಬಡ್ಡಿ, ದಂಡ, ಶುಲ್ಕ ಅಥವಾ ಯಾವುದೇ ಇತರ ಮೊತ್ತವನ್ನು, ಬಾಕಿಯಿರುವ ಮರುಪಾವತಿಯಿಂದ ಕಡಿತಗೊಳಿಸಬಹುದು.

ವಿವರಣೆ:- ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಪದಾವಳಿಯಾದ `ನಿರ್ದಿಷ್ಟಪಡಿಸಿದ ದಿನಾಂಕ'ವನ್ನು ಈ ಅಧಿನಿಯಮದ ಅಡಿಯಲ್ಲಿ ಅಪೀಲು ಸಲ್ಲಿಸಲು ಇರುವ ಕೊನೆಯ ದಿನಾಂಕ ಎಂದು ಅರ್ಥೈಸತಕ್ಕದ್ದು;

(11) ಮರುಪಾವತಿಗೆ ಎಡೆ ಮಾಡಿಕೊಡುವ ಒಂದು ಆದೇಶವು, ಒಂದು ಅಪೀಲು ಅಥವಾ ಮುಂದುವರೆದ ನಡಾವಳಿಗಳ ಅಥವಾ ಈ ಅಧಿನಿಯಮದ ಅಡಿಯಲ್ಲಿ ಇತ್ಯರ್ಥದಲ್ಲಿರುವ ಯಾವುದೇ ಇತರ ನಡಾವಳಿಗಳ ವಸ್ತುವಿಷಯವಾಗಿದ್ದಲ್ಲಿ ಮತ್ತು ದುಷ್ಕೃತ್ಯ ಅಥವಾ ಮೋಸ ಮಾಡಿದುದರ ಕಾರಣದಿಂದಾದ ಅಂಥ ಮರುಪಾವತಿಯ ನೀಡುವಿಕೆಯು ಸದರಿ ಅಪೀಲು ಅಥವಾ ಇತರ ನಡಾವಳಿಗಳಲ್ಲಿ ರಾಜಸ್ವಕ್ಕೆ ಪ್ರತಿಕೂಲ ಪರಿಣಾಮ ಬೀರುವ ಸಂಭವವಿದೆ ಎಂದು ಆಯುಕ್ತರು ಅಭಿಪ್ರಾಯವನ್ನು ಹೊಂದಿದ್ದಲ್ಲಿ, ಅವರು, ತೆರಿಗೆದಾಯಕ ವ್ಯಕ್ತಿಗೆ ಅಹವಾಲುಗಳನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ನಂತರ, ಅವರು ನಿರ್ಧರಿಸಬಹುದಾದ ಅಂಥ ಸಮಯದವರೆಗೆ ಮರುಪಾವತಿಯನ್ನು ತಡೆಹಿಡಿಯಬಹದು.

(12) ಉಪಪ್ರಕರಣ (11)ರ ಅಡಿಯಲ್ಲಿ ಮರುಪಾವತಿಯನ್ನು ತಡೆಹಿಡಿದಿದ್ದಲ್ಲಿ, ಅಪೀಲು ಅಥವಾ ಮುಂದುವರೆದ ನಡಾವಳಿಗಳ ಪರಿಣಾಮವಾಗಿ ತೆರಿಗೆದಾಯಕ ವ್ಯಕ್ತಿಯು ಮರುಪಾವತಿಗೆ ಹಕ್ಕುಳ್ಳವನಾದರೆ, ಪ್ರಕರಣ 56ರಲ್ಲಿ ಏನೇ ಒಳಗೊಂಡಿದ್ದರೂ ಸಹ, ಶೇಕಡಾ ಆರರಷ್ಟನ್ನು ಮೀರದಂತೆ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಅಧಿಸೂಚಿಸಬಹುದಾದ ಅಂಥ ದರದಲ್ಲಿ ಬಡ್ಡಿಗೆ ಹಕ್ಕುಳ್ಳವನಾಗಿರತಕ್ಕದ್ದು.

(13) ಈ ಪ್ರಕರಣದಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ, ಒಬ್ಬ ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿ ಅಥವಾ ಒಬ್ಬ ಅನಿವಾಸಿ ತೆರಿಗೆದಾಯಕ ವ್ಯಕ್ತಿಯು, ಪ್ರಕರಣ 27ರ ಉಪಪ್ರಕರಣ (2)ರ ಅಡಿಯಲ್ಲಿ ಠೇವಣಿ ಮಾಡಿದ ಮುಂಗಡ ತೆರಿಗೆಯ ಮೊತ್ತವನ್ನು, ಆತನಿಗೆ ಮಂಜೂರು ಮಾಡಿದ್ದ ನೋಂದಣಿ ಪ್ರಮಾಣ ಪತ್ರವು ಜಾರಿಯಲ್ಲಿ ಉಳಿದಿರುವ ಸಂಪೂರ್ಣ ಅವಧಿಗೆ ಸಂಬಂಧಿಸಿದಂತೆ, ಪ್ರಕರಣ 39ರ ಅಡಿಯಲ್ಲಿ ಅಗತ್ಯವಿರುವ ಎಲ್ಲಾ ರಿಟರ್ನಗಳನ್ನು ಅಂಥ ವ್ಯಕ್ತಿಯು ಸಲ್ಲಿಸಿದ ಹೊರತು ಮರುಪಾವತಿ ಮಾಡತಕ್ಕದ್ದಲ್ಲ.

(14) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಮೊತ್ತವಿದ್ದರೆ, ಉಪಪ್ರಕರಣ (5) ಅಥವಾ ಉಪಪ್ರಕರಣ (6)ರ ಅಡಿಯಲ್ಲಿ ಮರುಪಾವತಿಯನ್ನು, ಅರ್ಜಿದಾರನಿಗೆ ಸಂದಾಯ ಮಾಡತಕ್ಕದ್ದಲ್ಲ.

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ,-

(1) "ಮರುಪಾವತಿ" ಯು, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಶೂನ್ಯ-ದರದ ಪೂರೈಕೆಗಳ ಮೇಲೆ ಅಥವಾ ಅಂಥ ಶೂನ್ಯ-ದರದ ಪೂರೈಕೆಗಳನ್ನು ಮಾಡಲು ಉಪಯೋಗಿಸಿದ ಹೂಡುವಳಿಗಳು ಮತ್ತು ಹೂಡುವಳಿ ಸೇವೆಗಳ ಮೇಲಿನ ತೆರಿಗೆಯ ಮರುಪಾವತಿಯನ್ನು ಅಥವಾ ಪರಿಭಾವಿತ ರಫ್ತುಗಳು ಎಂದು ಪರಿಗಣನೆಗೆ ತೆಗೆದುಕೊಂಡ ಸರಕುಗಳ ಪೂರೈಕೆ ಮೇಲಿನ ತೆರಿಗೆಯ ಮರುಪಾವತಿಯನ್ನು, ಅಥವಾ ಉಪಪ್ರಕರಣ (3)ರ ಅಡಿಯಲ್ಲಿ ಉಪಬಂಧಿಸಿದಂತೆ ಬಳಕೆಯಾಗದ ಹೂಡುವಳಿ ತೆರಿಗೆ ಜಮೆಯ ಮರುಪಾವತಿಯನ್ನು ಒಳಗೊಳ್ಳುತ್ತದೆ.

(2) "ಸಂಬಂಧಿಸಿದ ದಿನಾಂಕ" ಎಚಿದರೆ:-

(ಎ) ಸರಕುಗಳು ಭಾರತದ ಹೊರಗಡೆಗೆ ರಫ್ತಾದ ಸಂದರ್ಭದಲ್ಲಿ, ಅದೇ ಸರಕುಗಳಿಗೆ ಅಥವಾ, ಅಂಥ ಸರಕುಗಳಲ್ಲಿ ಉಪಯೋಗಿಸಿದ ಹೂಡುವಳಿಗಳು ಅಥವಾ ಸಂದರ್ಭಾನುಸಾರವಾಗಿ ಹೂಡುವಳಿ ಸೇವೆಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಿದ ತೆರಿಗೆಯ ಮರುಪಾವತಿಯು ಲಭ್ಯವಿದ್ದಲ್ಲಿ,-

(i) ಸರಕುಗಳು ಸಮುದ್ರ ಅಥವಾ ವಾಯು ಮಾರ್ಗದ ಮೂಲಕ ರಫ್ತಾಗಿದ್ದರೆ, ಅಂಥ ಸರಕುಗಳನ್ನು ತುಂಬಿರುವ ಹಡಗು ಅಥವಾ ವಿಮಾನವು, ಭಾರತವನ್ನು ಬಿಟ್ಟ ದಿನಾಂಕ; ಅಥವಾ

(ii) ಸರಕುಗಳು ಭೂ ಮಾರ್ಗದ ಮೂಲಕ ರಫ್ತಾಗಿದ್ದರೆ, ಅಂಥ ಸರಕುಗಳು ಗಡಿಯನ್ನು ದಾಟಿದ ದಿನಾಂಕ; ಅಥವಾ

(iii) ಸರಕುಗಳು ಅಂಚೆಯ ಮೂಲಕ ರಫ್ತಾಗಿದ್ದರೆ, ಸಂಬಂಧಿಸಿದ ಅಂಚೆ ಕಛೇರಿಯಿಂದ ಭಾರತದ ಹೊರಗಿನ ಸ್ಥಳಕ್ಕೆ ಸರಕುಗಳ ರವಾನೆ ದಿನಾಂಕ.

(ಬಿ) ಪರಿಭಾವಿತ ರಫ್ತುಗಳು ಎಂದು ಪರಿಗಣನೆಗೆ ತೆಗೆದುಕೊಂಡ ಸರಕುಗಳ ಪೂರೈಕೆಯ ಸಂದರ್ಭದಲ್ಲಿ, ಸರಕುಗಳಿಗೆ ಸಂಬಂದಿಸಿದಂತೆ ತೆರಿಗೆ ಸಂದಾಯದ ಮರುಪಾವತಿಯು ಲಭ್ಯವಿದ್ದಲ್ಲಿ, ಅಂಥ ಪರಿಭಾವಿತ ರಫ್ತುಗಳಿಗೆ ಸಂಬಂಧಿಸಿದ ರಿಟರ್ನನ್ನು ಒದಗಿಸಿದ ದಿನಾಂಕ;

(ಸಿ) ಭಾರತದ ಹೊರಗಡೆಗೆ ರಫ್ತಾದ ಸೇವೆಗಳ ಸಂದರ್ಭದಲ್ಲಿ, ಅದೇ ಸೇವೆಗಳಿಗೆ ಅಥವಾ ಅಂಥ ಸೇವೆಗಳಲ್ಲಿ ಉಪಯೋಗಿಸಿದ ಹೂಡುವಳಿಗಳು ಅಥವಾ ಸಂದರ್ಭಾನುಸಾರವಾಗಿ, ಹೂಡುವಳಿ ಸೇವೆಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಿದ ತೆರಿಗೆಯ ಮರುಪಾವತಿಯು ಲಭ್ಯವಿದ್ದಲ್ಲಿ,-

(i)ಅಂಥ ಸಂದಾಯವನ್ನು ಸ್ವೀಕರಿಸುವುದಕ್ಕಿಂದ ಮುಂಚಿತವಾಗಿಯೇ ಸೇವೆಗಳ ಪೂರೈಕೆಯು ಪೂರ್ಣಗೊಂಡಿದ್ದಲ್ಲಿ, ಪರಿವರ್ತನೀಯ ವಿದೇಶಿ ವಿನಿಮಯದಲ್ಲಿ ಸಂದಾಯದ ಸ್ವೀಕೃತಿಯ ದಿನಾಂಕ; ಅಥವಾ

(ii)ಸೇವೆಗಳಿಗಾಗಿ, ಬೆಲೆಪಟ್ಟಿ ನೀಡಿಕೆಯ ದಿನಾಂಕಕ್ಕಿಂತ ಮುಂಚಿತವಾಗಿ, ಸಂದಾಯವನ್ನು ಮುಂಗಡವಾಗಿ ಸ್ವೀಕರಿಸಲಾಗಿದ್ದಲ್ಲಿ, ಬೆಲೆಪಟ್ಟಿ ನೀಡಿಕೆಯ ದಿನಾಂಕ;

(ಡಿ) ಅಪೀಲು ಪ್ರಾಧಿಕಾರ, ಅಪೀಲು ನ್ಯಾಯಾಧಿಕರಣ ಅಥವಾ ಯಾವುದೇ ನ್ಯಾಯಾಲಯದ ತೀರ್ಪು, ಡಿಕ್ರಿ, ಆದೇಶ ಅಥವಾ ನಿರ್ದೇಶನದ ಪರಿಣಾಮದಿಂದಾಗಿ, ತೆರಿಗೆಯು ಮರುಪಾವತಿದಾಯಕವಾದ ಸಂದರ್ಭದಲ್ಲಿ, ಅಂಥ ತೀರ್ಪು, ಡಿಕ್ರಿ, ಆದೇಶ ಅಥವಾ ನಿರ್ದೇಶನವನ್ನು ತಿಳಿಸಿದ ದಿನಾಂಕ;

(ಇ) ಉಪಪ್ರಕರಣ (3)ರ ಅಡಿಯಲ್ಲಿ ಬಳಕೆಯಾಗದ ಹೂಡುವಳಿ ತೆರಿಗೆ ಜಮೆಯ ಮರುಪಾವತಿಯ ಸಂದರ್ಭದಲ್ಲಿ, ಅಂಥ ಮರುಪಾವತಿಗಾಗಿ ಕ್ಲೇಮು ಉದ್ಭವಿಸುವಂತಹ ಹಣಕಾಸು ವರ್ಷದ ಮುಕ್ತಾಯ;

(ಎಫ್) ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ತಾತ್ಕಾಲಿಕವಾಗಿ ತೆರಿಗೆಯನ್ನು ಸಂದಾಯ ಮಾಡಿದ ಸಂದರ್ಭದಲ್ಲಿ, ಅದರ ಅಂತಿಮ ಕರನಿರ್ಧರಣೆಯ ನಂತರದಲ್ಲಿ ಮಾಡಿದ ತೆರಿಗೆಯ ಹೊಂದಾಣಿಕೆಯ ದಿನಾಂಕ;

(ಜಿ) ಪೂರೈಕೆದಾರನನ್ನು ಹೊರತುಪಡಿಸಿದ, ಒಬ್ಬ ವ್ಯಕ್ತಿಯ ಸಂದರ್ಭದಲ್ಲಿ, ಅಂಥ ವ್ಯಕ್ತಿಯಿಂದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡೂ ಸ್ವೀಕೃತಿಯಾದ ದಿನಾಂಕ;

(ಹೆಚ್) ಯಾವುದೇ ಇತರ ಸಂದರ್ಭದಲ್ಲಿ, ತೆರಿಗೆಯನ್ನು ಸಂದಾಯ ಮಾಡಿದ ದಿನಾಂಕ.

ಪರಂತು, ಮುರುಗಡೆಗೊಳಿಸಿದ ಮೊತ್ತವು, ಮುರುಗಡೆಗೊಳಗಾದವನ ವಿದ್ಯುನ್ಮಾನ ನಗದು ಖಾತೆಗೆ ಜಮೆಗೊಳಿಸಲಾಗಿದ್ದರೆ, ಮುರುಗಡೆದಾರನಿಗೆ ಮರುಪಾವತಿ ನೀಡತಕ್ಕದ್ದಲ್ಲ.

## ಕರ್ನಾಟಕ ಸರಕು ಮತ್ತು ಸೇವೆಗಳ ನಿಯಮಗಳು, 2017 ರ ಅಡಿಯಲ್ಲಿ *ಟಿಡಿಎಸ್ ಉಪಬಂಧಗಳು*

66. ಮೂಲದಲ್ಲಿ ತೆರಿಗೆಯನ್ನು ಮುರುಗಡೆ ಮಾಡುವುದು ಅಗತ್ಯವಿರುವ ಒಬ್ಬ ವ್ಯಕ್ತಿಯಿಂದ ರಿಟರ್ನಿನ ಸಲ್ಲಿಕೆಯ ನಮೂನೆ ಮತ್ತು ವಿಧಾನ.- (1) ಪ್ರಕರಣ 51ರ ಅಡಿಯಲ್ಲಿ ಮೂಲದಲ್ಲಿ ತೆರಿಗೆಯನ್ನು ಮುರುಗಡೆ ಮಾಡುವುದು ಅಗತ್ಯವಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಒಂದು ರಿಟರ್ನನ್ನು, ನಮೂನೆ ಜಿಎಸ್‌ಟಿಆರ್-7ರÀಲ್ಲಿ ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

(2) ಉಪನಿಯಮ (1)ರ ಅಡಿಯಲ್ಲಿ ಒಬ್ಬ ಮುರುಗಡೆದಾರನು ಒದಗಿಸಿದ ವಿವರಗಳನ್ನು, ಪ್ರತಿಯೊಬ್ಬ ಪೂರೈಕೆದಾರರುಗಳಿಗೆ ನಮೂನೆ ಜಿಎಸ್‌ಟಿಆರ್-2ಎಯ ಭಾಗ ಸಿ ಯಲ್ಲಿ ಮತ್ತು ನಮೂನೆ ಜಿಎಸ್‌ಟಿಆರ್-4ಎ ಯಲ್ಲಿ ಸಾಮಾನ್ಯ ಪೋರ್ಟಲ್‌ನಲ್ಲಿ, ನಮೂನೆ ಜಿಎಸ್‌ಟಿಆರ್-7ನ್ನು ಸಲ್ಲಿಸಲು ಇರುವ ಗಡುವು ದಿನಾಂಕದ ನಂತರ ವಿದ್ಯುನ್ಮಾನ ರೀತಿಯಲ್ಲಿ ಲಭ್ಯ ಮಾಡತಕ್ಕದ್ದು.

(3) ಉಪನಿಯಮ (1)ರ ಅಡಿಯಲ್ಲಿ ನಮೂನೆ ಜಿಎಸ್‌ಟಿಆರ್-7ಎ ಯಲ್ಲಿ ಒದಗಿಸಿದ ರಿಟರ್ನಿನ ಆಧಾರದ ಮೇಲೆ, ಪ್ರಕರಣ 51ರ ಉಪಪ್ರಕರಣ (3)ರಲ್ಲಿ ಉಲ್ಲೇಖಿಸಲಾದ ಪ್ರಮಾಣ ಪತ್ರವನ್ನು, ಸಾಮಾನ್ಯ ಪೋರ್ಟಲ್‌ನಲ್ಲಿ, ವಿದ್ಯುನ್ಮಾನ ರೀತಿಯಲ್ಲಿ ನೀಡತಕ್ಕದ್ದು.

*****